# MIDH ಯೋಜನೆಯ ರಾಷ್ಟ್ರೀಯ ತೋಟಗಾರಿಕೆ ಮಿಷನ್ ಉಪ ಯೋಜನೆಯಡಿಯಲ್ಲಿ ಮಾರುಕಟ್ಟೆಗಳ ಸ್ಥಾಪನೆಗೆ ಸಹಾಯಧನ ಮಂಜೂರು ಮಾಡುವ ಬಗ್ಗೆ ಮಾರ್ಗಸೂಚಿ.

## 1. ತೋಟಗಾರಿಕೆ ಉತ್ಪನ್ನಗಳಿಗೆ ಮಾರುಕಟ್ಟೆ ಮೂಲಭೂತ ಸೌಕರ್ಯ : (Establishment of Marketing Infrastructure for Horticulture Produce) (Project Mode)

ರೈತರು ಬೆಳೆಯುವ ತೋಟಗಾರಿಕೆ ಉತ್ಪನ್ನಗಳಿಗೆ ಉತ್ತಮ ಬೆಲೆ ದೊರಕಿಸಿಕೊಡುವಲ್ಲಿ ಸುಧಾರಿತ ಮಾರುಕಟ್ಟೆ ವ್ಯವಸ್ಥೆಯ ಪಾತ್ರ ಅತಿ ಮುಖ್ಯವಾಗಿರುತ್ತದೆ. ಮಾರುಕಟ್ಟೆ ವ್ಯವಸ್ಥೆಯಲ್ಲಿ ಪ್ರಮುಖವಾಗಿ ಮಾರುಕಟ್ಟೆ ಪ್ರಾಂಗಣ, ಸಂಗ್ರಹಣಾ ಕೇಂದ್ರಗಳು, ಕ್ಯೂರಿಂಗ್ ವ್ಯವಸ್ಥೆ, ಪದಾರ್ಥಗಳಿಗೆ ತಕ್ಕಂತೆ ಪ್ಯಾಕೇಜಿಂಗ್ ಇತ್ಯಾದಿ ವ್ಯವಸ್ಥೆಗಳಿಂದ ತೋಟಗಾರಿಕೆ ಉತ್ಪನ್ನಗಳ ಗುಣಮಟ್ಟವನ್ನು ಹೆಚ್ಚಿಸುವುದರ ಮೂಲಕ ಉತ್ತಮ ಬೆಲೆಯನ್ನು ಒದಗಿಸಿಕೊಡಬಹುದಾಗಿರುತ್ತದೆ. ಈ ದಿಸೆಯಲ್ಲಿ ಸರ್ಕಾರಿ / ಸಹಕಾರಿ / ಖಾಸಗಿ ವಲಯದಲ್ಲಿ ಹೊಸದಾಗಿ ನಿರ್ಮಿಸುವ ಗ್ರಾಮೀಣ ಮಾರುಕಟ್ಟೆ / ರೈತ ಸಂತೆ / ಸಗಟು ಮಾರುಕಟ್ಟೆಗಳಿಗೆ ಸುಧಾರಿತ ಮೂಲಭೂತ ಸೌಕರ್ಯಗಳನ್ನು ಕಲ್ಪಿಸಲು ಸಹಾಯಧನವನ್ನು ನೀಡುವುದು ಈ ಯೋಜನೆಯ ಮುಖ್ಯ ಉದ್ದೇಶವಾಗಿರುತ್ತದೆ.

### a. ಸಗಟು ಮಾರುಕಟ್ಟೆ (Whole sale Market) :

- ❖ ಹೊಸ ಮಾರುಕಟ್ಟೆಯ ಸ್ಥಾಪನೆ ಹಾಗೂ ಹಾಲಿ ಇರುವ ಮಾರುಕಟ್ಟೆಯ ಉನ್ನತೀಕರಣ ಮತ್ತು ನವೀಕರಣಕ್ಕಾಗಿ ಸಹಾಯಧನವನ್ನು ನೀಡಲಾಗುವುದು.
- ❖ ಯೋಜನಾ ವೆಚ್ಚ ಗರಿಷ್ಠ ರೂ. 100.00 ಕೋಟಿಗಳವರೆಗೆ. ಶೇ. 25 ರಂತೆ ಗರಿಷ್ಠ ರೂ. 25.00 ಕೋಟಿ ಸಹಾಯಧನವನ್ನು ನೀಡಲಾಗುವುದು.
- ❖ ಈ ಸಹಾಯಧನವು back ended credit linked ಸ್ವರೂಪದ್ದಾಗಿರುತ್ತದೆ.
- ❖ ಖಾಸಗಿ ವಲಯದಲ್ಲಿ ಅಗ್ರಿಇನ್ಫ್ರಾಸ್ಟ್ರಕ್ಚರ್ ಫಂಡ್ ನೊಂದಾಯಿತ RBI ಅನುಮೋದಿತ online banking (IFSC code, RTGS, NEFT ಇತರೆ) ಸೌಲಭ್ಯವನ್ನು ಹೊಂದಿರುವ ಬ್ಯಾಂಕ್ ನಿಂದ ಸಾಲ ಪಡೆಯುವುದು ಕಡ್ಡಾಯವಾಗಿರುತ್ತದೆ.
- ❖ ಸಹಾಯಧನಕ್ಕಾಗಿ ಕೇವಲ ಸ್ಥಿರ ಬಂಡವಾಳ ಹೂಡಿಕೆಯನ್ನು (Capital cost) ಮಾತ್ರ ಪರಿಗಣಿಸಲಾಗುವುದು. ದುಡಿಯುವ ಬಂಡವಾಳ ಹೂಡಿಕೆ (Recurring costs) ಗಳನ್ನು ಗಣನೆಗೆ ತೆಗೆದುಕೊಳ್ಳಲಾಗುವುದಿಲ್ಲ.
- ❖ ಸಹಾಯಧನ ಮಂಜೂರಾದ ನಂತರ, ಅದನ್ನು ಫಲಾನುಭವಿಗಳು ಹೊಂದಿದ ಬ್ಯಾಂಕ್ ಸಾಲದ ಖಾತೆಗೆ ಜಮೆ ಮಾಡಲಾಗುವುದು.

ವಿ.ಸೂ.

- ❖ ಉದ್ದಿಮೆದಾರರು ಮಾರುಕಟ್ಟೆ ನಿರ್ಮಿಸಿದ ನಂತರ ಕನಿಷ್ಠ 15 ವರ್ಷಗಳವರೆಗೆ ಮಾರುಕಟ್ಟೆಯನ್ನು ನಿರ್ವಹಿಸಬೇಕು. ಈ ಅವಧಿಗೆ ಮೊದಲು ಯಾವುದೇ ಆಸ್ತಿಯನ್ನು ವರ್ಗಾಯಿಸಬಾರದು.
- ❖ ಉದ್ದಿಮೆದಾರರು ರೈತರಿಗೆ ಬೇಕಾಗುವ ಸಲಹಾ ಸೇವೆಗಳನ್ನು ಹಾಗೂ ಮಾರುಕಟ್ಟೆಗೆ ಸಂಬಂಧಿಸಿದಂತೆ ಮಾಹಿತಿ, ಸಂಗ್ರಹಣೆ, ವರ್ಗೀಕರಣ ಮತ್ತು ಪ್ರಾಥಮಿಕ ಸಂಸ್ಕರಣೆಗೆ ಸಂಬಂಧಿಸಿದಂತೆ ಸೇವೆಯನ್ನು ಒದಗಿಸುವುದು.

## ಸಗಟು ಮಾರುಕಟ್ಟೆಗಳಲ್ಲಿ ಅಭಿವೃದ್ಧಿಪಡಿಸಬೇಕಾದ ಮೂಲಭೂತ ಸೌಕರ್ಯಗಳು (Indicative) :

- ಕನಿಷ್ಠ 50 ಎಕರೆ ಜಮೀನಿನಲ್ಲಿ ಮಾರುಕಟ್ಟೆ ನಿರ್ಮಾಣ.
- ಹರಾಜು ಕಟ್ಟೆಗಳು Online trading system - Quality control Lab for certification of the produce traded.
- ಒಣಗಿಸುವ ಕಟ್ಟೆಗಳು
- ಗೋದಾಮುಗಳು
- ಶೀತ ಸರಪಳಿ (Cold chain) ವ್ಯವಸ್ಥೆ
- ಗ್ರೇಡಿಂಗ್ ಮತ್ತು ವಿದ್ಯುನ್ಮಾನ ತೂಕದ ಯಂತ್ರೋಪಕರಣಗಳು
- ಮಾರುಕಟ್ಟೆಯಲ್ಲಿ ಆಂತರಿಕ ರಸ್ತೆಗಳು
- ಯಾರ್ಡ್ ಮತ್ತು ರಸ್ತೆಗಳಲ್ಲಿ ವಿದ್ಯುತ್ತೀಕರಣ
- ಮಾರುಕಟ್ಟೆ ಆಧುನೀಕರಣ ಹಾಗೂ ಯಾಂತ್ರೀಕರಣ
- ನಿರಂತರ ನೀರು ಪೂರೈಕೆ ವ್ಯವಸ್ಥೆ
- ರೈತ ವಿಶ್ರಾಂತಿ ಗೃಹ
- ಕ್ಯಾಂಟೀನ್
- ವಾಹನ ಪಾರ್ಕಿಂಗ್ ವ್ಯವಸ್ಥೆ
- ನೀರು ಸರಬರಾಜು ಹಾಗೂ ಶೌಚಾಲಯದ ವ್ಯವಸ್ಥೆ
- ಕಸ ವಿಲೇವಾರಿಗೆ ವ್ಯವಸ್ಥೆ ಮತ್ತು ಘನ ತ್ಯಾಜ್ಯ ನಿರ್ವಹಣೆ (Solid waste management) ಘಟಕ
- ಕಾಂಪೌಂಡ್ ಗೋಡೆ, ಗೇಟ್ ಮತ್ತು check post ನ entry and exit ನಲ್ಲಿ CC camera ಇತ್ಯಾದಿ ವ್ಯವಸ್ಥೆ
- ಸೌರಶಕ್ತಿ ಅಳವಡಿಕೆ
- ಆಸಕ್ತ ಫಲಾನುಭವಿಗಳು ಹತ್ತಿರದ ತಾಲ್ಲೂಕು / ಜಿಲ್ಲೆ / ಮಿಷನ್ ನಿರ್ದೇಶನಾಲಯದ ಅಧಿಕಾರಿಗಳನ್ನು ಸಂಪರ್ಕಿಸಿ ಈ ಬಗೆಗಿನ ಹೆಚ್ಚಿನ ವಿವರಗಳನ್ನು ಪಡೆಯಬಹುದಾಗಿದೆ.

## b) ಗ್ರಾಮೀಣ ಮಾರುಕಟ್ಟೆ / ರೈತ ಸಂತೆ / ನೇರ ಮಾರುಕಟ್ಟೆಗಳು :

ಗ್ರಾಮೀಣ ಹಾಗೂ ಒಳ ಪ್ರದೇಶಗಳಲ್ಲಿ ಚಿಕ್ಕ ಪ್ರಮಾಣದ ಮಾರುಕಟ್ಟೆಗಳನ್ನು ಮತ್ತು ರೈತರೇ ನೇರವಾಗಿ ತಾವು ಬೆಳೆದ ಫಸಲನ್ನು ಗ್ರಾಹಕರಿಗೆ ಮಾರಲು ಅವಶ್ಯವಿರುವ ರೈತ ಸಂತೆಗಳ ನಿರ್ಮಾಣಕ್ಕೆ NHM ಯೋಜನೆಯಡಿಯಲ್ಲಿ ಸಹಾಯಧನವನ್ನು ನೀಡಲಾಗುತ್ತಿದೆ.

**ವಿವರಗಳು :**

- ಅರ್ಹ ಹಾಗೂ ಮಾರುಕಟ್ಟೆ ವಿಷಯದಲ್ಲಿ ಪರಿಣತಿ ಇರುವ ವ್ಯಕ್ತಿ / ಸಂಘ ಸಂಸ್ಥೆಗಳಿಗೆ ಈ ಸಹಾಯಧನವನ್ನು ನೀಡಲಾಗುವುದು.
- ಯೋಜನಾ ವೆಚ್ಚ ಗರಿಷ್ಠ ರೂ. 25.00 ಲಕ್ಷಗಳವರೆಗೆ.
- ಶೇ. 40 ರಂತೆ ಗರಿಷ್ಠ ರೂ. 10.00 ಲಕ್ಷಗಳ ಸಹಾಯಧನವನ್ನು ನೀಡಲಾಗುವುದು.
- ಈ ಸಹಾಯಧನವು back ended credit linked ಸ್ವರೂಪದ್ದಾಗಿರುತ್ತದೆ.
- ಖಾಸಗಿ ವಲಯದಲ್ಲಿ ಬ್ಯಾಂಕ್ ವತಿಯಿಂದ ಸಾಲ ಪಡೆಯುವುದು ಕಡ್ಡಾಯವಾಗಿರುತ್ತದೆ.

- ಸಹಾಯಧನಕ್ಕಾಗಿ ಕೇವಲ ಸ್ಥಿರ ಬಂಡವಾಳ ಹೂಡಿಕೆಯನ್ನು (Capital cost) ಮಾತ್ರ ಪರಿಗಣಿಸಲಾಗುವುದು. ದುಡಿಯುವ ಬಂಡವಾಳ ಹೂಡಿಕೆ (Recurring costs) ಗಳನ್ನು ಗಣನೆಗೆ ತೆಗೆದುಕೊಳ್ಳಲಾಗುವುದಿಲ್ಲ.
- ಸಹಾಯಧನ ಮಂಜೂರಾದ ನಂತರ, ಅದನ್ನು ಫಲಾನುಭವಿಗಳು ಹೊಂದಿದ ಬ್ಯಾಂಕ್ ಸಾಲದ ಖಾತೆಗೆ ಜಮೆ ಮಾಡಲಾಗುವುದು.
- ಕಸ ವಿಲೇವಾರಿಯ ವ್ಯವಸ್ಥೆ ಮತ್ತು ಘನ ತ್ಯಾಜ್ಯ ನಿರ್ವಹಣೆ (Solid waste management) ಘಟಕ

**ಗ್ರಾಮೀಣ ಮಾರುಕಟ್ಟೆಗಳಲ್ಲಿ ಅಭಿವೃದ್ಧಿಪಡಿಸಬೇಕಾದ ಸೌಕರ್ಯಗಳು :**

- ಕನಿಷ್ಠ 0.5 ಎಕರೆ ಪ್ರದೇಶದಲ್ಲಿ ಮಾರುಕಟ್ಟೆ ನಿರ್ಮಾಣ
- ಮೇಲ್ಛಾವಣಿ ಸಹಿತ ಹರಾಜು ಕಟ್ಟೆಗಳು
- ಒಣಗಿಸುವ ಕಟ್ಟೆಗಳು
- ಗೋದಾಮುಗಳು
- ಗ್ರೇಡಿಂಗ್ ಮತ್ತು ವಿದ್ಯುನ್ಮಾನ ತೂಕ ಮಾಡುವ ಯಂತ್ರೋಪಕರಣಗಳು
- ನಿರಂತರ ನೀರು ಪೂರೈಕೆ ವ್ಯವಸ್ಥೆ
- ನೀರು ಸರಬರಾಜು ಹಾಗೂ ಶೌಚಾಲಯದ ವ್ಯವಸ್ಥೆ
- ಕಸ ವಿಲೇವಾರಿಗೆ ವ್ಯವಸ್ಥೆ

ಆಸಕ್ತ ಫಲಾನುಭವಿಗಳು ಹತ್ತಿರದ ತಾಲ್ಲೂಕು / ಜಿಲ್ಲೆ / ಮಿಷನ್ ನಿರ್ದೇಶನಾಲಯದ ಅಧಿಕಾರಿಗಳನ್ನು ಸಂಪರ್ಕಿಸಿ ಈ ಬಗೆಗಿನ ಹೆಚ್ಚಿನ ವಿವರಗಳನ್ನು ಪಡೆಯಬಹುದಾಗಿದೆ.

**c) ಚಿಲ್ಲರೆ ಮಾರುಕಟ್ಟೆ (Retail Market) :**

ರೈತರೇ ನೇರವಾಗಿ ತಾವು ಬೆಳೆದ ಫಸಲನ್ನು ಗ್ರಾಹಕರಿಗೆ ಮಾರಾಟ ಮಾಡಲು ನಗರ ಮತ್ತು ಗ್ರಾಮೀಣ ಪ್ರದೇಶಗಳಲ್ಲಿ ಸಣ್ಣ ಪ್ರಮಾಣದ ಮಾರುಕಟ್ಟೆಗಳನ್ನು ಸ್ಥಾಪಿಸಲು NHM ಯೋಜನೆಯಡಿಯಲ್ಲಿ ಸಹಾಯಧನವನ್ನು ನೀಡುವ ಅವಕಾಶವಿರುತ್ತದೆ.

**ವಿವರಗಳು :**

- ಅರ್ಹ ಹಾಗೂ ಮಾರುಕಟ್ಟೆ ವಿಷಯದಲ್ಲಿ ಪರಿಣತಿ ಇರುವ ವ್ಯಕ್ತಿ / ಸಂಘ ಸಂಸ್ಥೆಗಳಿಗೆ ಈ ಸಹಾಯಧನವನ್ನು ನೀಡಲಾಗುವುದು.
- ಯೋಜನಾ ವೆಚ್ಚ ಗರಿಷ್ಠ ರೂ. 15.00 ಲಕ್ಷಗಳವರೆಗೆ.
- ಶೇ. 35 ರಂತೆ ಗರಿಷ್ಠ ರೂ. 5.25 ಲಕ್ಷಗಳ ಸಹಾಯಧನವನ್ನು ನೀಡಲಾಗುವುದು.
- ಈ ಸಹಾಯಧನವು back ended credit linked ಸ್ವರೂಪದ್ದಾಗಿರುತ್ತದೆ.
- ಖಾಸಗಿ ವಲಯದಲ್ಲಿ ಬ್ಯಾಂಕ್ ವತಿಯಿಂದ ಸಾಲ ಪಡೆಯುವುದು ಕಡ್ಡಾಯವಾಗಿರುತ್ತದೆ.
- ಸಹಾಯಧನಕ್ಕಾಗಿ ಕೇವಲ ಸ್ಥಿರ ಬಂಡವಾಳ ಹೂಡಿಕೆಯನ್ನು (Capital cost) ಮಾತ್ರ ಪರಿಗಣಿಸಲಾಗುವುದು. ದುಡಿಯುವ ಬಂಡವಾಳ ಹೂಡಿಕೆ (Recurring costs) ಗಳನ್ನು ಗಣನೆಗೆ ತೆಗೆದುಕೊಳ್ಳಲಾಗುವುದಿಲ್ಲ.
- ಸಹಾಯಧನ ಮಂಜೂರಾದ ನಂತರ, ಅದನ್ನು ಫಲಾನುಭವಿಗಳು ಹೊಂದಿದ ಬ್ಯಾಂಕ್ ಸಾಲದ ಖಾತೆಗೆ ಜಮೆ ಮಾಡಲಾಗುವುದು.
- ನೊಂದಾಯಿತ ರೈತ ಬೆಳೆಗಾರರ ಸಂಘ / ರೈತ ಗುಂಪುಗಳು / ವಿವಿಧ ಸಂಘ-ಸಂಸ್ಥೆಗಳನ್ನು ಆಯ್ಕೆ ಮಾಡುವುದು.

(5)

**b) ಚಿಲ್ಲರೆ ಮಾರುಕಟ್ಟೆಗಳಲ್ಲಿ ಅಭಿವೃದ್ಧಿಪಡಿಸಬೇಕಾದ ಸೌಕರ್ಯಗಳು :**

- ❖ ಕನಿಷ್ಠ 0.10 ಎಕರೆ ಪ್ರದೇಶದಲ್ಲಿ ಮಾರುಕಟ್ಟೆ ನಿರ್ಮಾಣ
- ❖ ಹರಾಜು ಕಟ್ಟೆಗಳು
- ❖ ಒಣಗಿಸುವ ಕಟ್ಟೆಗಳು
- ❖ ಗ್ರೇಡಿಂಗ್ ಮತ್ತು ವಿದ್ಯುನ್ಮಾನ ತೂಕ ಮಾಡುವ ಯಂತ್ರೋಪಕರಣಗಳು
- ❖ ಮಾರುಕಟ್ಟೆ ಆಧುನೀಕರಣ ಹಾಗೂ ಯಾಂತ್ರೀಕರಣ
- ❖ ಪ್ಯಾಕಿಂಗ್ ಘಟಕ
- ❖ ತಾತ್ಕಾಲಿಕ ಶೇಖರಣಾ ಘಟಕ
- ❖ ಪ್ಲಾಸ್ಟಿಕ್ ಕ್ರೇಟ್ಸ್

ಆಸಕ್ತ ಫಲಾನುಭವಿಗಳು ಹತ್ತಿರದ ತಾಲ್ಲೂಕು / ಜಿಲ್ಲೆ / ಮಿಷನ್ ನಿರ್ದೇಶನಾಲಯದ ಅಧಿಕಾರಿಗಳನ್ನು ಸಂಪರ್ಕಿಸಿ ಈ ಬಗೆಗಿನ ಹೆಚ್ಚಿನ ವಿವರಗಳನ್ನು ಪಡೆಯಬಹುದಾಗಿದೆ.

ಮಿಷನ್ ನಿರ್ದೇಶಕರು

ಮತ್ತು

ತೋಟಗಾರಿಕೆ ನಿರ್ದೇಶಕರು

## CHECK LIST

1 Name and address of the organization

2 Location

3 Management

4 Name of the Project

5 Promoters background

6 Category and Registration

7 Objectives

8 Brief background of the project

9 Whether the market is regulated Constitution

10 Area of operation with special reference to National Horticulture Mission Districts to be covered.

11 Present annual arrivals (last financial year)

12 Anticipated total arrivals of agriculture commodities in the market for the next ten years

13 Proposed Project cost

14 Cost of Project

15 Means of Finance

16 Bank loan & Appraisal report

17 Details of cost of plant and machinery / equipment supported by quotations.

18 Plan & estimates of civil works

19 Area of operation with special reference to National Horticulture Mission Districts to be covered.

(3)

20 Availability of raw material, name of the cluster and district along with the major crops

21 Back ward linkages with farmers.

22 Facilities to be provided at main Mar

23 No. of Farmers Benefited

24 Forward linkages – analysis of domestic and export markets

25 Rate of market fee levied or proposed to be levied if any.

26 Present position about land

27 Raw material mobilization, technology – process Specification, SWOT Analysis

28 Financial analysis – IRR, NPV, Cost benefit ratio, Breakeven point, DER, DSCR, projected balance sheet etc.

29 Implementation schedule

30 Certificate from pollution control department

31 Certificate regarding non-availing of subsidy from any other Central/state Govt. departments

32 Social benefits with special reference to employment generation

33 Draft MOU & Cost benefit ratio

34 Conclusion

35 Amount of subsidy sought.